ಸಂದರ್ಭದಲ್ಲಿ ಇದು ಸಬ್‌ಜ್ಯುಡಿಸ್ ಆಗುತ್ತದೆ ಎನ್ನುವ ನಿರ್ಣಯವನ್ನು ತಾವು ಕೊಟ್ಟಿರುತ್ತೀರಿ. ಹೀಗಾಗಿ ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಮ್ಮ ನಿರ್ಣಯಕ್ಕೂ ಬಾಧೆ ಬಾರದ ರೀತಿಯಲ್ಲಿ ಈ ಒಂದು ವಿಷಯ ಚರ್ಚೆಯಾಗಬೇಕಾಗಿದೆ. ಅದಕ್ಕಾಗಿ ರೂಲ್-69ರ ಅಡಿಯಲ್ಲಿ ಅಥವಾ ಬೇರೆ ರೂಪದಲ್ಲಿ ತಾವು ಒಂದು ನಿಯಮಾವಳಿಯನ್ನು ಅದಕ್ಕೆ ಅಳವಡಿಸಿ, ಆ ಒಂದು ರೂಪದಲ್ಲಿ ಈ ಒಂದು ವಿಷಯದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದು. ಇಡೀ ರಾಜ್ಯದ ಸಾರ್ವಜನಿಕರು ಈ ಒಂದು ಸದನದಲ್ಲಿ ಈ ವಿಷಯದ ಬಗ್ಗೆ ಏನು ಚರ್ಚೆಯಾಗುತ್ತದೆಂದು ನೋಡುತ್ತಿದ್ದಾರೆ. ಯಾವುದೇ ಒಂದು ರೂಪದಲ್ಲಿ ತಾವು ಈ ಒಂದು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ತಮಗೆ ನಾವು ಬಹಳಷ್ಟು ಧನ್ಯವಾದಗಳನ್ನು ಹೇಳುತ್ತೇನೆ. ಅದಕ್ಕಾಗಿ ತಾವು ಇದಕ್ಕೆ ಅವಕಾಶವನ್ನು ಕೊಡಬೇಕು. ಸರ್ಕಾರ ಇದನ್ನು ಪ್ರತಿಷ್ಠೆಯ ವಿಷಯವಾಗಿ ಮಾಡಿಕೊಳ್ಳದೆ ಚರ್ಚೆಗೆ ಅವಕಾಶ ಒದಗಿಸಲಿ. ತಾವು ಏನಾದರೂ ಇದಕ್ಕೆ ಒಂದು ಸ್ಪಷ್ಟೀಕರಣವನ್ನು ಕೊಡಿ. ನಮ್ಮ ಕಡೆ ಹೊಸ ಹೊಸ ವಿಷಯಗಳಿವೆ, ಬಹಳಷ್ಟು ಡಾಕ್ಯುಮೆಂಟ್ಸ್‌ಗಳು ಇವೆ, ಅವುಗಳನ್ನು ನಾವು ತಮ್ಮ ದೃಷ್ಟಿಗೆ ತೆಗೆದುಕೊಂಡು ಬರುತ್ತೇವೆ. ಇದಕ್ಕೆ ಸರ್ಕಾರ ಮೊಂಡುತನವನ್ನು ಮಾಡದೆ, ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಯಾವುದೇ ಒಂದು ರೂಪದಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ ನಾವು ಸಿದ್ಧರಿದ್ದೇವೆ. ಅದಕ್ಕಾಗಿ ದಯಮಾಡಿ ಸರ್ಕಾರ ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಒಂದು ಗಂಭೀರವಾದಂಥ ಚಿಂತನೆಯನ್ನು ಮಾಡಬೇಕು. ತಾವು ಪ್ರತಿ ಪಕ್ಷದವರ ಕಡೆ ಸ್ವಲ್ಪ ಲಕ್ಷ ವಹಿಸಿ ನಮ್ಮ ಕಡೆಗೂ ಸ್ವಲ್ಪ ಪಾಲಿಸಿ ತಾವು ಸದನದ ಸಾರ್ವಭೌಮತ್ವವನ್ನು ಕಾಪಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ನಾನು ಹೆಚ್ಚಾಗಿ ನಿಮ್ಮ ಕಡೆಯೇ ಗಮನಕೊಡುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್: ಮತ್ತೆ ಇದರ ಜೊತೆಗೆ ನಮ್ಮ ಜೊತೆಗೆ ಜನತಾದಳ(ಯು) ಹಾಗೂ ಜನತಾದಳ(ಎಸ್)ನ ಶಾಸಕರು ಹಾಗೂ ಅವರ ನಾಯಕರು ಈ ವಿಷಯದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದರ ಬಗ್ಗೆ ಸಾಕಷ್ಟು ನಾಯಕರುಗಳು ಮಾತನಾಡುವವರಿದ್ದಾರೆ. ಈ ವಿಷಯದ ಮೇಲೆ ಚರ್ಚೆಯಾಗಲಿಲ್ಲ ಎನ್ನುವ ದೃಷ್ಟಿಯಿಂದ ಅವರು ನಿನ್ನೆ ಬಹಿಷ್ಕಾರವನ್ನು ಹಾಕಿ ಸದನದಿಂದ ಹೊರ ಹೋಗಿದ್ದರು. ಇವತ್ತು ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ, ದಯಮಾಡಿ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇವೆ.

(ನಂತರ ಸದನದ ಬಾವಿಗೆ ಶ್ರೀ ಜಗದೀಶ ಶೆಟ್ಟರ್‌ರವರು ಬಂದರು)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ದಿವಸ ರಾಜ್ಯ ಮತ್ತು ರಾಷ್ಟ್ರದ ಗಮನವನ್ನು ಸೆಳೆದಿರತಕ್ಕಂಥ ಒಂದು ಸಾರ್ವಜನಿಕ ಮಹತ್ವದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ನಾವು ಒಂದು ನಿಲುವಳಿ